ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ಆರ್ ಎನ್ ಎಸ್ - 19

3ನೇ ವರ್ಷ 29ನೇ ಸಂಚಿಕೆ ಭಾನುವಾರ 30-6-1985 ಭಾನುವಾರ ಬೆಲೆ 40 ಪೈಸೆ

ಚಿಕ್ಕಮಗಳೂರು: ಎನ್.ಆರ್.ಇ.ಪಿ. ಗೆ ಒಂದು ವರೆ ಕೋಟಿ ರೂ:

ಎಲ್ಲ ಸರ್ಕಾರಿ ಪ್ರೌಢಶಾಲೆಗಳಿಗೂ ಕಟ್ಟಡ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಆರಂಭಿಸಲಾಗಿರುವ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೂ ಈ ವರ್ಷ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಕಟ್ಟಡ ನಿರ್ಮಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಈಚೆಗೆ ನಡೆದ ಜಿಲ್ಲಾಭಿವೃದ್ಧಿ ಸಮಿತಿಯ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

1985–86 ನೇ ಸಾಲಿಗೆ ಜಿಲ್ಲೆಯಲ್ಲಿ 1 ಕೋಟಿ 50 ಲಕ್ಷ ರೂ. ಗಳ ಎನ್.ಆರ್.ಇ.ಪಿ. ಯೋಜನೆಯನ್ನು ಸಮಿತಿ ಅನುಮೋದಿಸಿತು.

ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಕಾಲೋನಿಗಳಲ್ಲಿ 33 ಶಾಲಾ ಕಟ್ಟಡಗಳು, 5 ಅಂಗನವಾಡಿ ಹಾಗೂ 5 ವಿದ್ಯಾರ್ಥಿ ನಿಲಯಗಳ ಕಟ್ಟಡಗಳು, 6 ಮನರಂಜನಾ ಕಟ್ಟಡ, 9 ಸಾಮೂಹಿಕ ಮನೆಗಳು, 70 ರಸ್ತೆ ಕಾಮಗಾರಿ ಹಾಗೂ 40 ಕುಡಿಯುವ ನೀರಿನ ಬಾವಿಗಳ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

ಇದಲ್ಲದೆ, ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ 97 ಶಾಲಾ ಕಟ್ಟಡ, 11 ವಿದ್ಯಾರ್ಥಿ ನಿಲಯ, 5 ಪಶುವೈದ್ಯಶಾಲೆ, 18 ಅಂಗನವಾಡಿ ಕಟ್ಟಡಗಳು ಹಾಗೂ ವಾಚನಾಲಯ, ಪಂಚಾಯ್ತಿ, ವಸತಿಗೃಹಗಳನ್ನೊಳಗೊಂಡ ಇನ್ನಿತರ 40 ಕಟ್ಟಡಗಳನ್ನು ನಿರ್ಮಿಸುವುದು, ಗ್ರಾಮಗಳಿಗೆ ರಸ್ತೆ ಸಂಪರ್ಕ ಹಾಗೂ ರಸ್ತೆ ಅಭಿವೃದ್ಧಿ ಪಡಿಸಲು 175 ಕಾಮಗಾರಿಗಳು, 46 ಕುಡಿಯುವ ನೀರಿನ ಬಾವಿ, 293 ಹೆಕ್ಟೇರ್ ಪ್ರದೇಶದಲ್ಲಿ ಸಾಮಾಜಿಕ ಅರಣ್ಯ ಬೆಳೆಸುವುದು, 55 ಸಣ್ಣ ನೀರಾವರಿ ಕಾಮಗಾರಿಗಳು ಯೋಜನೆಯಲ್ಲಿರುವ ಪ್ರಮುಖ ಕಾರ್ಯಕ್ರಮಗಳು.

ಮಲೆನಾಡ ಸಂಸ್ಕೃತಿಯನ್ನು ಪ್ರತಿಬಿಂಬಿಸಲು ಸಚಿವ ಗೋವಿಂದ ಗೌಡರ ಕರೆ

ಬೆಂಗಳೂರು: ಬೆಂಗಳೂರಿನಂತಹ ವಿಭಿನ್ನ ಸಂಸ್ಕೃತಿಗಳ ಮಹಾನಗರದಲ್ಲಿ ಮಲೆನಾಡ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸಿ ಬೆಳೆಸಬೇಕೆಂದು ಸಚಿವ ಹೆಚ್. ಜಿ. ಗೋವಿಂದ ಗೌಡ ಇಲ್ಲಿ ಕರೆ ನೀಡಿದರು. ಹೋಟೆಲ್ ಕಾನಿಷ್ಕದಲ್ಲಿ ಇಲ್ಲಿನ "ಮಲೆನಾಡು ಮಿತ್ರ ವೃಂದ" ಈಚೆಗೆ ಏರ್ಪಡಿಸಿದ್ದ "ಸ್ನೇಹ ಸಂಜೆ" ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಕಡಿದಾಳ್ ಮಂಜಪ್ಪನವರು ವಹಿಸಿದ್ದರು. ಚಿತ್ರನಟ ಮಾನು ಮುಖ್ಯ ಅತಿಥಿಯಾಗಿದ್ದರು. ಸಮಾರಂಭದಲ್ಲಿ ಮಾಜಿ ಸ್ಪೀಕರ್ ಡಿ.ಬಿ. ಚಂದ್ರೇಗೌಡ ಮತ್ತು ಶಾಸಕ ಐ. ಬಿ. ಶಂಕರ್ ಉಪಸ್ಥಿತರಿದ್ದರು.

ಕೆ.ಎಸ್. ಮಲ್ಲಪ್ಪ ಗೌಡ ಸ್ವಾಗತ ಕೋರಿದರು. ಸಂಘದ ಅಧ್ಯಕ್ಷ ಹೆಚ್.ಸಿ. ಜಯಪ್ರಕಾಶ್ ಸಂಘದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಕೆ.ಎಸ್. ಕೃಷ್ಣ ಸಭೆಯಲ್ಲಿರುವವರ ಪರಿಚಯ ಮಾಡಿಕೊಟ್ಟರು. ಎ. ಎನ್. ಜಯಚಂದ್ರ ವಂದಿಸಿದರು.

ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಂದ

'ಅಪವ್ಯಯ'ದ ಹಣ ವಸೂಲಿ: ದೇವೇಗೌಡ

ಬೆಂಗಳೂರು: ಕಾಮಗಾರಿಗಳಿಗಾಗಿ ಮಂಜೂರಾದ ಹಣ ಪೋಲಾಗುವುದಕ್ಕೆ ಕಾರಣವಾಗುವ ಅಥವಾ ಪ್ರಶ್ನಾರ್ಹ ರೀತಿಯಲ್ಲಿ ವರ್ತಿಸುವ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳು ಮತ್ತಿತರ ಅಧಿಕಾರಿಗಳಿಂದ ಅಪವ್ಯಯ ಮಾಡಲಾದ ಹಣವನ್ನು ವಸೂಲು ಮಾಡಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಕಾಮಗಾರಿ ಮಂತ್ರಿ ಹೆಚ್. ಡಿ. ದೇವೇಗೌಡ ತಿಳಿಸಿದ್ದಾರೆ.

ಅವರುಗಳನ್ನು ಕೇವಲ ಸಸ್ಪೆಂಡ್ ಮಾಡಿದರೆ ಅವರನ್ನು ಶಿಕ್ಷಿಸಿದಂತಾಗುವುದಿಲ್ಲ. ಏಕೆಂದರೆ ಸಸ್ಪೆಂಡ್ ಆದಾಗ ಅವರು ತಮ್ಮ ಸಂಬಳದ ಬಹು ಭಾಗ (ಶೇ. 90 ರಷ್ಟು) ಪಡೆಯುತ್ತಾರೆ. ಆದ್ದರಿಂದ ಅವರುಗಳನ್ನು ಅಮಾನತಿನಲ್ಲಿಡುವುದಲ್ಲದೆ ಬಂಧಿಸಿ ಉಗ್ರ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಈಗಿನ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲಾಗುವುದು ಎಂದೂ ದೇವೇಗೌಡ ಸ್ಪಷ್ಟಪಡಿಸಿದ್ದಾರೆ.

ಲೋಪದೋಷಗಳಿಗೆ ಸಣ್ಣಪುಟ್ಟ ಇಂಜಿನಿಯರ್‌ಗಳನ್ನು ಹೊಣೆಗೊಳಿಸುವುದಕ್ಕಿಂತಲೂ, ಎಕ್ಸಿಕ್ಯೂಟಿವ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳನ್ನೇ ಅವರ ವ್ಯಾಪ್ತಿಯಲ್ಲಿನ ಲೋಪಗಳಿಗೆ ಹೊಣೆಗಾರರನ್ನಾಗಿ ಮಾಲಾಗುವುದು ಎಂದೂ ತಿಳಿಸಿದ ದೇವೇಗೌಡರು, ಹಠಾತ್ ತನಿಖೆಯ ಕಾರ್ಯಕ್ರಮ ತಾವು ಮುಂದುವರಿಸುವುದಲ್ಲದೆ, ಸೂಪರಿಂಟೆಂಡಿಂಗ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳೂ ಈ ವ್ಯವಸ್ಥೆ ಪಾಲಿಸುವಂತೆ ಮಾಡಲಾಗುವುದೆಂದರು,

ಅವರ ಈ ನಿರ್ಧಾರ ಒಂದು ಉತ್ತಮ ಹೆಜ್ಜೆಯೆಂಬುದರಲ್ಲಿ ಅನುಮಾನವಿಲ್ಲ.

ಕಟ್ಟಡ, ಕಾಮಗಾರಿಗಳಲ್ಲಿ ತೀವ್ರವಾದ ಲೋಪಗಳು ನಡೆಯುವುದಕ್ಕೆ, ಅಧಿಕಾರಿಗಳ ಶಾಮೀಲಿನೊಂದಿಗೆ ಕಳಪೆ ಕೆಲಸ ನಡೆಯುವುದು ಹಾಗೂ ಕಳಪೆ ಮಾಲುಗಳನ್ನು ಉಪಯೋಗಿಸಿರುವುದು ಒಂದು ಪ್ರಮುಖ ಕಾರಣ ಹೌದು. ಅದರ ಜೊತೆಗೆ, ಇಲಾಖೆಯ ಮೂಲಕ ಸರಬರಾಜಾಗುವ ಹೆಸರಾಂತ ಕಂಪೆನಿಗಳ ಸಿಮೆಂಟ್ ಕೂಡ ಹಲವು ಸಲ ತೀರ ಕಳಪೆಯಾಗಿರುವುದೂ ಕಂಡು ಬರುತ್ತದೆ.

ಇದಕ್ಕೆ ಕಳೆದ ವರ್ಷ ಕೊಪ್ಪ ಅರಣ್ಯ ಇಲಾಖೆಯ ವಿಭಾಗ ಕಚೇರಿಗಾಗಿ ಕಟ್ಟಲಾಗುತ್ತಿರುವ ಕಟ್ಟಡದ ಒಂದು ಪಾರ್ಶ್ವ ಬಿದ್ದು ಹೋದುದನ್ನು ಉದಹರಿಸಬಹುದು. ಬಿರ್ಲಾ ಗುಂಪಿನ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯ ಎ.ಸಿ.ಸಿ. ಸಿಮೆಂಟ್ ಉಪಯೋಗಿಸಿದ ಈ ಪಾರ್ಶ್ವದ ಕಾಂಕ್ರೀಟು ಹಾಸ್ಯಾಸ್ಪದವೆಂಬಷ್ಟು ಶಿಥಿಲವಾಗಿತ್ತು. ಭದ್ರಾವತಿ ಸಿಮೆಂಟ್ ಬಳಸಿದ ಇನ್ನೊಂದು ಪಾರ್ಶ್ವ ಕಲ್ಲಿನಂತೆ ನಿಂತಿತ್ತು.

ಈ ಪ್ರಕರಣದಲ್ಲೇನೋ ಅದರ ಕಂಟ್ರಾಕ್ಟರರು ತಮ್ಮ ಖರ್ಚಿನಲ್ಲೇ ಅದನ್ನು ಪುನರ್ನಿರ್ಮಿಸಿಕೊಡಲು ಒಪ್ಪಿದರು. ಆದರೆ ಅವರಿಗೆ ಇನ್ನ್ಯಾವುದೋ ಕಾಮಗಾರಿಯಲ್ಲಿ ಈ 'ನಷ್ಟ'ವನ್ನು ತುಂಬಿಕೊಳ್ಳಲು ಅವಕಾಶ ಕೊಡಲೇಬೇಕಾಗುತ್ತದಷ್ಟೆ? ಹಾಗೆ 'ತುಂಬಿದ' ಹೆಚ್ಚುವರಿ ಹಣ ಎಲ್ಲಿಂದ ಬರುತ್ತದೆ?

ಆದ್ದರಿಂದ ಬಹಳ ಬಲಿಷ್ಟ, ಪ್ರಭಾವಿಗಳಾದ ಇಂಥ 'ಲಾಬಿ'ಗಳವರು ಇಲಾಖೆಗೆ ಸರಬರಾಜು ಮಾಡುವ ಸಿಮೆಂಟ್ ಮತ್ತಿತರ ಮಾಲುಗಳ ಗುಣಮಟ್ಟದ ಬಗ್ಗೆ ಸಹಾ ದೇವೇಗೌಡರು ಗಟ್ಟಿ ಮನಸ್ಸಿನ ಕ್ರಮ ತೆಗೆದುಕೊಳ್ಳಲು ಸಾಧ್ಯವಾದರೆ ಮಾತ್ರ ಅವರ ಈಗಿನ ನಿರ್ಧಾರ ಪೂರ್ಣ ಫಲ ನೀಡಬಲ್ಲುದು.

ಇಲ್ಲವಾದರೆ ಲೋಪಗಳು ನಡೆಯುತ್ತವೆ. ದಾಖಲೆಗಳು ಅವಕ್ಕೆ ಏನಾದರೊಂದು ಸಬೂಬು ಸೃಷ್ಟಿಸುತ್ತಲೇ ಹೋಗುತ್ತವೆ. ದೇವೇಗೌಡರ ಘೋಷಣೆ ಪತ್ರಿಕಾ ಪ್ರಚಾರದಲ್ಲಿ ಮಾತ್ರ ಉಳಿದು ಹೋಗುತ್ತದೆ.

ಏರ್ ಇಂಡಿಯಾ ಜಂಬೋಜೆಟ್ ದುರಂತ

ದೇಶದ ಪ್ರಜ್ಞೆ ಸ್ತಿಮಿತ ಕಳೆದುಕೊಳ್ಳಬಾರದು

ಕೆನಡಾ ದೇಶದ ಟೊರಾಂಟೊದಿಂದ ಮಾಂಟ್ರಿಯಲ್, ಲಂಡನ್, ದೆಹಲಿ ಮಾರ್ಗವಾಗಿ ಮುಂಬಯಿಗೆ ಹೊರಟಿದ್ದ ಏರ್ ಇಂಡಿಯ ಜಂಬೋಜೆಟ್–747 ವಿಮಾನವೊಂದು ಜೂನ್ 23 ರ ಬೆಳಿಗ್ಗೆ 8–15 ರ ಹೊತ್ತಿಗೆ (ಭಾರತೀಯ ಕಾಲ ಮಧ್ಯಾಹ್ನ 12–45) ಅಟ್ಲಾಂಟಿಕ್ ಸಾಗರದ ಮೇಲೆ 31 ಸಾವಿರ ಅಡಿಗಳೆತ್ತರದಲ್ಲಿ ಹಾರುತ್ತ ದುರಂತಕ್ಕೀಡಾಗಿ ಐರ್ಲೆಂಡ್ ದೇಶದ ದಕ್ಷಿಣಕ್ಕೆ 178 ಕಿ.ಮೀ. ದೂರದಲ್ಲಿ ಸಾಗರಕ್ಕೆ ಬಿದ್ದು, ಅದರಲ್ಲಿದ್ದ 329 ಜನರೂ ಅಸುನೀಗಿದ್ದಾರೆ. ಇದರಲ್ಲಿ 22 ಜನ ವಿಮಾನದ ಸಿಬ್ಬಂದಿ, 77 ಮಕ್ಕಳು ಮತ್ತು 4 ಶಿಶುಗಳು. ವಿಮಾನ ಇನ್ನು ಕೇವಲ 40 ನಿಮಿಷಗಳಲ್ಲಿ ಲಂಡನ್ನಿನಲ್ಲಿ ಇಳಿಯುವುದಿತ್ತು.

ಸತ್ತವರಲ್ಲಿ ಕೇವಲ 131 ದೇಹಗಳನ್ನು ಮಾತ್ರ ಹೊರ ತೆಗೆಯಲಾಗಿದೆ. ವಿಮಾನದ ದುರಂತಕ್ಕೆ ಕಾರಣ ಸೂಚಿಸಬಲ್ಲ 'ಫ್ಲೈಟ್ ರೆಕಾರ್ಡರ್' ಎಂಬ ಸೀಲ್ ಆದ ಉಪಕರಣಕ್ಕಾಗಿ ಅತ್ಯಾಧುನಿಕ ಸಬ್‌ಮೆರಿನ್‌ಗಳು ತೀವ್ರ ಶೋಧ ನಡೆಸುತ್ತಿವೆ.

§ § §

ಪಂಜಾಬ್ ಮತ್ತು ಕಾಶ್ಮೀರಗಳ ಉಗ್ರಗಾಮಿ ಗುಂಪುಗಳವರೆಂದು ಹೇಳಿಕೊಂಡವರು ತಾವು ಈ ವಿಮಾನದಲ್ಲಿ ಬಾಂಬ್ ಇಟ್ಟಿದ್ದುದಾಗಿ ಪತ್ರಿಕಾಲಯಗಳಿಗೆ ಫೋನ್ ಮಾಡಿ ಹೇಳಿಕೊಂಡಿದ್ದಾರೆ. ಆದರೆ ಖಲಿಸ್ತಾನವಾದಿ ನಾಯಕ ಜಗಜಿತ್‌ಸಿಂಗ್ ಚೌಹಾನ್ ಹಾಗೂ ಕೆನಡ, ಅಮೆರಿಕಗಳಲ್ಲಿರುವ ಸಿಖ್ ನಾಯಕರುಗಳು ಈ ಭಯೋತ್ಪಾದಕ ಕೃತ್ಯ ಸಿಖ್ಖರಿಂದಾದುದೆಂಬುದನ್ನು ತೀವ್ರವಾಗಿ ಅಲ್ಲಗಳೆದು ಈ ಕೃತ್ಯವನ್ನು ಖಂಡಿಸಿದ್ದಾರೆ. ಪಶ್ಚಿಮ ರಾಷ್ಟ್ರಗಳಲ್ಲಿ ಸಿಖ್ಖರನ್ನು ಅಪಖ್ಯಾತಿಗೊಳಿಸಲು ಭಾರತ ಸರ್ಕಾರವೇ ಈ ಫೋನ್ ಕರೆಗಳನ್ನು ಮಾಡಿಸಿದೆಯೆಂದು ಸಿಖ್ ನಾಯಕರುಗಳು ಆಪಾದಿಸಿ ಯಾರು ಬೇಕಾದರೂ ಇಂಥ ಕರೆಗಳನ್ನು ಮಾಡಲು ಸಾಧ್ಯ ಎಂದಿದ್ದಾರೆ.

§ § §

ದುರಂತಕ್ಕೆ ಕಾರಣವೇನು? ವಿಧ್ವಂಸಕ ಕೃತ್ಯವೆ? ಯಾರಿಂದ? ಎಂಬುದೆಲ್ಲ ಇನ್ನೂ ಖಚಿತವಾಗಿ ಗೊತ್ತಾಗಿಲ್ಲ. ಆದರೆ ಈ ಫೋನ್ ಕರೆಗಳು ಹಾಗೂ ಕೆನಡಾ, ಬ್ರಿಟನ್, ಅಮೆರಿಕಗಳಲ್ಲಿ ಬಹುಮಂದಿ ಪ್ರತ್ಯೇಕತಾವಾದಿ ಸಿಖ್ ಉಗ್ರಗಾಮಿಗಳು ನೆಲೆಸಿರುವುದು– ಇವುಗಳಿಂದಾಗಿ ಇದು ಅವರದೇ ಭಯೋತ್ಪಾದನೆಯ ಕೃತ್ಯ ಎಂಬಂಥ ಪ್ರಚಾರ ಎಲ್ಲೆಡೆ ವ್ಯಾಪಿಸಿಬಿಟ್ಟಿದೆ.

ಈ ಸಂದರ್ಭದಲ್ಲಿ ದೇಶ, ಇಂದಿರಾ ಗಾಂಧಿಯವರ ಹತ್ಯೆಯ ಸಂದರ್ಭದಲ್ಲಿನಂತೆ, ತನ್ನ ಸ್ತಿಮಿತವನ್ನು ಕಳೆದುಕೊಳ್ಳಬಾರದು. ಯಾರ್ಯಾರೋ ಯಾರ ಮೇಲೋ "ಸೇಡು" ತೀರಿಸಲು ಹೊರಡಬಾರದು. ಇದು ಉಗ್ರಗಾಮಿಗಳದೇ ಕೃತ್ಯವಾಗಿದ್ದಲ್ಲಿ, ಮೊದಲಿಗೆ ಅದರ ಹಿನ್ನೆಲೆಯಲ್ಲಿರುವವನ್ನು ಹಿಡಿದು ಶಿಕ್ಷಿಸಲು ಸರ್ಕಾರಕ್ಕೆ ಅವಕಾಶ ಕೊಡಬೇಕು. ನಂತರ ಸಿಖ್ ಭಯೋತ್ಪಾದನೆಗೆ ಕಾರಣವಾದ ಸನ್ನಿವೇಶವನ್ನು ನಿವಾರಿಸಿ, ಇಡೀ ಭಯೋತ್ಪಾದನೆಯನ್ನೇ ಕೊನೆಗಾಣಿಸಬೇಕು. ಇದೇ ನೂ ಅಸಾಧ್ಯವಲ್ಲ, ಕಷ್ಟಸಾಧ್ಯ ಅಷ್ಟೆ. ಎಲ್ಲ ಸಿಖ್ಖರೂ ಉಗ್ರಗಾಮಿಗಳಲ್ಲ, ಅವರದೂ ಸಮಸ್ಯೆಗಳಿವೆ, ಬೇಡಿಕೆಗಳಿವೆ ಎಂಬುದನ್ನು ದೇಶ ಈ ಸಂದರ್ಭದಲ್ಲಿ ಮರೆತು ವರ್ತಿಸಬಾರದು. ●

ಮಲೆನಾಡಿನಲ್ಲಿ ಅರಣ್ಯ ಬೆಳೆಸುವ ಯೋಜನೆಗಿಂತ ಅರಣ್ಯ ಉಳಿಸುವ ಯೋಜನೆಗೆ ಮೊದಲ ಪ್ರಾಶಸ್ತ್ಯ ಸಲ್ಲಬೇಕು

— ಟಿ. ವಿ. ಎನ್. ಹೇರಳೆ —

[ಅರಣ್ಯಗಳ ಬಗ್ಗೆ ಕಳಕಳಿ ಇರುವವರಲ್ಲೊಬ್ಬರಾದ ಟಿ.ವಿ. ನರಸಿಂಹ ಹೇರಳೆಯವರು ಕಳೆದ ತಿಂಗಳು ಹರಿಹರಪುರದಲ್ಲಿ ನಡೆದ ಅರಣ್ಯ ಇಲಾಖೆಯ ವಿಚಾರ ಸಂಕಿರಣಕ್ಕೆ ಆಹ್ವಾನಿತರಾಗಿದ್ದು, ಅಲ್ಲಿ "ಆಹ್ವಾನಿತರ ಅನಿಸಿಕೆಗಳು" ಅವಧಿಯಲ್ಲಿ ಚರ್ಚಿಸುವುದಕ್ಕಾಗಿ ಸಿದ್ಧಪಡಿಸಿದ್ದ ಈ ಲೇಖನವನ್ನು 2 ಭಾಗಗಳಲ್ಲಿ ಈ ವಾರ ಮತ್ತು ಮುಂದಿನವಾರ ಪ್ರಕಟಿಸುತ್ತಿದ್ದೇವೆ.–ಸಂ.]

-ಭಾಗ—1-

ಅರಣ್ಯ ನಾಶವನ್ನು ತಡೆಗಟ್ಟುವುದು; ಅರಣ್ಯ ಅಭಿವೃದ್ಧಿಯಲ್ಲಿ ಅಸಮಂಜಸ ಧೋರಣೆಯ ಕೆಲವು ಅಂಶಗಳು.

1. ದೇಶಕ್ಕೆ ಸ್ವಾತಂತ್ರ್ಯಬಂದ ನಂತರ ಅರಣ್ಯ ನಾಶ ಪ್ರಾರಂಭವಾಯ್ತು ಎಂದರೆ ತಪ್ಪಾಗಲಾರದು. ಇದರಲ್ಲಿ 'ರಾಜಕೀಯ'ವೂ ಹಾಗೂ ರಾಜಕೀಯ ಧುರೀಣರ ಸಹಾನುಭೂತಿಯೂ ಸೇರಿತ್ತೆಂದರೆ ತಪ್ಪಲ್ಲ. ಜೊತೆಯಲ್ಲಿ ಬಿಗಿಯಾದ ಅರಣ್ಯ ಪಾಲನೆಯ ಕಾನೂನು ಸಹಕಾರಿಯಾಗಿಲ್ಲದ್ದೂ ಒಂದು ಕಾರಣವಾಗಿದೆ.

2. ನೇರವಾಗಿ ಸರ್ಕಾರದಿಂದ ಮತ್ತು ಅದರ ವಿವಿಧ ಕಾರ್ಯಕ್ರಮಗಳಿಂದ ಆಗಿರುವ ಅರಣ್ಯ ನಾಶವನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು:

(ಸಂಖ್ಯೆಗಳು ಹೆಕ್ಟೇರ್‌ಗಳಲ್ಲಿ)

1. ನೀರಿನಲ್ಲಿ ಮುಳುಗಿದ್ದು	3,584
2. ಗಣಿ ಕೆಲಸದಲ್ಲಿ ನಾಶವಾದ್ದು	42,676
3. ಪುನರ್ವಸತಿ ಬಗ್ಗೆ	25,820
4. ಕಾಳಿ ಯೋಜನೆ	12,500
5. ಚಕ್ರಾ ಯೋಜನೆ	2,600
6. ವಾರಾಹಿ ಯೋಜನೆ	15,634
7. ಗಂಗಾವತಿ ಯೋಜನೆ	10,039
8. ರಸ್ತೆ ನಿರ್ಮಾಣ, ಪಟ್ಟಣ, ವಿದ್ಯುಚ್ಛಕ್ತಿ ಇತ್ಯಾದಿ	10,041
9. ಕೃಷಿ ಬಗ್ಗೆ	67,217

ಭಾರತದಲ್ಲಿ ಈಗ ಕೇವಲ ಶೇ. 11.5 ರಷ್ಟು ಮಾತ್ರ ಅರಣ್ಯ ಪ್ರದೇಶವಿದೆಯೆಂದು ಡಾ|| ಶಿವರಾಮ ಕಾರಂತರು ಬರೆದಿದ್ದಾರೆ 1976 ರಲ್ಲಿ ಈ ಪ್ರಮಾಣ ಶೇ. 15.2 (28,95,000 ಹೆಕ್ಟೇರ್) ಇತ್ತು.

3. ಸರ್ಕಾರಿ ಜಾಗದಲ್ಲಿ ಮರ ಕಡಿದರೆ 3 ತಿಂಗಳು ಶಿಕ್ಷೆ, ರೂ.1000 ಜುಲ್ಮಾನೆ ವಿಧಿಸುವ ಬಗ್ಗೆ ತಾ: 24–7–1976 ರಲ್ಲಿ ಸುಗ್ರೀವಾಜ್ಞೆ ಜಾರಿಗೆ ಬಂದಿದ್ದರೂ, ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಇಲಾಖೆಯವರು ಉದಾಸೀನ ಸ್ವಭಾವ ತಳೆದಿದ್ದಾರೆ.

4. ತಮಿಳುನಾಡು ಸರ್ಕಾರ 15ಸಾವಿರ ಹೆಕ್ಟೇರ್ ಸಾಮಾಜಿಕ ಅರಣ್ಯ ಬೆಳೆಸಿದ್ದರೆ, ಕರ್ನಾಟಕ ಸರ್ಕಾರ ಕೇವಲ 7 ಸಾವಿರ ಹೆಕ್ಟೇರ್ ಬೆಳೆಸಿದೆ.

5 ಸರ್ಕಾರವು ಅರಣ್ಯಾಭಿವೃದ್ಧಿ ಕುರಿತಂತೆ ನೀತಿಯನ್ನು ರೂಪಿಸುವಲ್ಲಿ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ತನ್ನದೇ ಸ್ರೀತಿಯನ್ನು ಮುಂದುವರಿಸುವುದರಿಂದ, ರೈತರಲ್ಲಿ ಸರ್ಕಾರ ತಮಗೆ ತೊಂದರೆ ಕೊಡುವ ಉದ್ದೇಶದಿಂದಲೇ ಅರಣ್ಯಾಭಿವೃದ್ಧಿ ಕಾನೂನುಗಳನ್ನು ರೂಪಿಸುತ್ತದೆ ಎಂಬ ಭಾವನೆ ಸಹಜವಾಗಿ ಬೆಳೆಯುತ್ತಿದೆ.

6. ದಟ್ಟವಾದ ಕಾಡನ್ನು ಕಡಿದು ಬೇರಾವುದೋ ಒಂದು ಜಾತಿಯ ಮರವನ್ನು ಬೆಳೆಸುವ ಅರಣ್ಯ ಇಲಾಖೆಯ ಕ್ರಮವು ತೋಟ ಬೆಳೆದಂತೆ ಆಗಬಹುದೇ ವಿನಹಾ ಅರಣ್ಯವು ಬೆಳೆಸಿದಂತೆ ಆಗಲಾರದು.

7. ಪ್ರತಿ ಬೇಸಿಗೆಯಲ್ಲೂ ಕಾಡ್ಗಿಚ್ಚಿನಿಂದ ನಾಶವಾಗುವ ಕಾಡನ್ನು ರಕ್ಷಿಸಿದರೆ ಈಗ ಬೆಳೆಸುವ ಕಾಡಿಗಿಂತ ಜಾಸ್ತಿ ಪ್ರಮಾಣವಾಗಬಹುದು.

8. 1972ರಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಜಾರಿಗೆ ಬಂದಿತು. 134 ತಾಲ್ಲೂಕುಗಳನ್ನು ಒಳಗೊಂಡು 1300 ಕಿಲೋಮೀಟರ್ ಉದ್ದಕ್ಕೆ 1 ಲಕ್ಷ 39 ಸಾವಿರ ಚದರ ಮೈಲಿ ಪ್ರದೇಶವು ಈ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೆ ಸೇರಿದೆ. 1974 ರಿಂದ 1984 ರವರೆಗೆ ಕರ್ನಾಟಕ ಸರ್ಕಾರ ಈ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ 16 ಕೋಟಿ ರೂಪಾಯಿ ವೆಚ್ಚ ಮಾಡಿದೆ.

ಎ) ಮಲ್ಪೆ, ಮಡಿಕೇರಿ,ಮುರುಕಲ್‌ಗಳಲ್ಲಿ ಟೂರಿಸ್ಟ್ ಹೋಟೆಲ್‌ಗಳ ನಿರ್ಮಾಣಕ್ಕೆ 75 ಲಕ್ಷ ರೂ.

ಬಿ) 1120 ಸ್ಥಳಗಳಲ್ಲಿ ಆರಂಭಿಸಿದ ತರಕಾರಿ ಬೆಳೆ ಪರೀಕ್ಷಾ ಕ್ಷೇತ್ರಗಳಿಗೆ ಹಾಗೂ ಹೊಳೆ ಹಳ್ಳಗಳ ಸಂಕಕ್ಕೆ ಸುಮಾರು 74 ಲಕ್ಷ ರೂ.

ಸಿ) ಸಮುದ್ರಕ್ಕೆ ಸೇರುವ ನದಿ ಅಳಿವೆಗಳ ರಿಪೇರಿಗಾಗಿ 17 ಲಕ್ಷ ರೂ.

ಡಿ) ಗಾಳಿ ವೇಗವನ್ನು ಅಳೆಯುವ ಯಂತ್ರಗಳ ಸ್ಥಾಪನೆಗೆ 6 ಲಕ್ಷ ರೂ.

ಇ) ಪಶು ಸಂಗೋಪನೆ, ತೋಟಗಾರಿಕೆ, ನೀರಾವರಿ, ರೇಷ್ಮೆ, ಕೃಷಿ, ಚಿಕ್ಕ ಉದ್ದಿಮೆ —ಹೀಗೆ ಅನೇಕ ಬಾಬುಗಳಿಗೆ ಹೆಚ್ಚಿನ ರೀತಿಯಲ್ಲಿ ಖರ್ಚಾಗಿದ್ದು, **ಅರಣ್ಯದ ಅಭಿವೃದ್ಧಿಗೆ ವೆಚ್ಚ ಮಾಡಿರುವ ಹಣ ಅಲ್ಪ ಪ್ರಮಾಣದ್ದಾಗಿದೆ.**

(1974–75 ರಿಂದ 1977–78 ರ ವರೆಗಿನ ಅವಧಿಯಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಕುರಿತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮುದ್ರಿಸಿದ ವರದಿ ಕೈಪಿಡಿಯಲ್ಲಿ ಅರಣ್ಯ ಅಭಿವೃದ್ಧಿ ಬಗ್ಗೆ ಖರ್ಚು ಮಾಡಿರುವ ಬಗ್ಗೆ ಅಂಕಿ ಅಂಶಗಳೇ ಇಲ್ಲ.)

9. ಅರಣ್ಯ ಇಲಾಖೆಯವರು ಪ್ರತಿ ತಾಲ್ಲೂಕುವಾರು ಅರಣ್ಯದ ಲೆಕ್ಕಗಳನ್ನೂ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಒಳಗೊಂಡಂತೆ ಒಂದು ಕೈಪಿಡಿಯನ್ನು ಹೊರತಂದಿಲ್ಲ.

10) ದರ್ಖಾಸ್ತು ಕೊಡುವಾಗಲೂ 1 ಎಕರೆಗೆ 19 ಮರದ ಒಳಗೇ ಇರಬೇಕು ಎಂಬ ಸರ್ಕಾರಿ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತಿಲ್ಲ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.)

ಇಂದಿಗೂ ರೈತನಿಂದ ನಾಶವಾಗುವ ಕಾಡಿಗಿಂತ ರೈತರಲ್ಲದವರಿಂದ ಲೂಟಿ ಆಗುವುದೇ ಜಾಸ್ತಿ ಆಗಿದೆ.

ಪಶ್ಚಿಮ ಘಟ್ಟಗಳಲ್ಲಿ ನೈಸರ್ಗಿಕವಾಗಿ ಮಳೆ ಮತ್ತಿತರ ಹವಾಮಾನದ ಅನುಕೂಲವಿರುವುದರಿಂದ ಸಸ್ಯರಾಶಿಯು ಸ್ವಾಭಾವಿಕವಾಗಿಯೇ ಬೆಳೆಯುತ್ತಿರುವಾಗ ಇಲ್ಲಿ ಅರಣ್ಯ ಬೆಳೆಸುವ ಯೋಜನೆಗಿಂತ ಅರಣ್ಯ ಉಳಿಸುವ ಯೋಜನೆಗೆ ಹೆಚ್ಚು ಪ್ರಾಶಸ್ತ್ಯ ಸಲ್ಲಬೇಕಾಗಿದೆ.

ಅರಣ್ಯ ನಾಶದಿಂದ ನಮ್ಮ ಸುತ್ತಲ ಪ್ರಕೃತಿಯ 'ಆರೋಗ್ಯ' ಹದಗೆಡುತ್ತದೆ ಇದರಿಂದ ನಮ್ಮ ಜೀವನವೇ ಅಸ್ತವ್ಯಸ್ತವಾಗುತ್ತದೆ.

ಅರಣ್ಯ ನಾಶ ತಡೆಗಟ್ಟಿ.

ಅರಣ್ಯಾಭಿವೃದ್ಧಿ ವಿಚಾರಸಂಕಿರಣದಲ್ಲಿ ಕೈಗೊಳ್ಳಲಾದ ನಿರ್ಣಯಗಳ ಸಮಂಜಸತೆಯ ಬಗ್ಗೆ ....

ಅರಣ್ಯ ಇಲಾಖೆ ನಡೆಸಿದ 'ಸಾಮಾಜಿಕ ಅರಣ್ಯ ಯೋಜನೆ' ಕುರಿತ ವಿಚಾರ ಸಂಕಿರಣದ ಬಗೆಗೆ ಇದು ಓದುಗರ 2 ನೇ ಪ್ರತಿಕ್ರಿಯೆ.

23–5–85 ರಂದು ಸಾಮಾಜಿಕ ಅರಣ್ಯ ಕುರಿತ ವಿಚಾರ ಸಂಕಿರಣದಲ್ಲಿ ಚರ್ಚೆಗೆ ಬಂದು ನಿರ್ಣಯರೂಪದಲ್ಲಿ ಪಾಸಾದ ಅಂಶಗಳನ್ನೂ ಮತ್ತು ಚರ್ಚೆಗೆ ಬಂದೂ ನಿರ್ಣಯ ರೂಪದಲ್ಲಿ ಪಾಸಾಗದ ಅಂಶಗಳನ್ನೂ ('ಮುಂಜಾವು' 2–6–1985) ಗಣನೆಗೆ ತೆಗೆದುಕೊಂಡು ವಿಶ್ಲೇಷಿಸಿದರೆ ನಿರಾಶೆಯಾಗುತ್ತದೆ. ಅಷ್ಟೇ ಅಲ್ಲದೆ ಆ ನಿರ್ಣಯಗಳಲ್ಲಿ ಕೆಲವು ಮೇಲ್ನೋಟಕ್ಕೇ ಅಸಮಂಜಸವೆಂದು ಕಾಣಿಸುವುದರಿಂದ ಅವುಗಳನ್ನು ಸರ್ಕಾರ ಒಪ್ಪೀತೇ ಮತ್ತು ಒಪ್ಪಿದಲ್ಲಿ ಏನಾದರೂ ಉಪಯೋಗವಾದೀತೇ ಅಂತ ಅನುಮಾನವಾಗುತ್ತದೆ.

ಉದಾಹರಣೆಗೆ, ಸೌರಬಲೆ, ಎ.ಇ.ಹೆಚ್. ಮುಂತಾದುವು ಮಲೆನಾಡಿಗಂತೂ ಉಪಯುಕ್ತವಾಗಲಾರವು. ಹೆಚ್ಚು ಕಾಲ ಸುರಿಯುವ ಮಳೆವಿದ್ಯುತ್‌ಪೂರೈಕೆಗೆ ಉಂಟಾಗುವ ಅಡಚಣೆಗಳು ಮತ್ತು ಅವುಗಳನ್ನು ಪಡೆಯಲು ತಗಲುವ ವೆಚ್ಚಗಳನ್ನು ಗಮನಿಸಿದರೆ. **ನಗರ ಪ್ರದೇಶಗಳಲ್ಲೇ ಉಪಯುಕ್ತವಾಗಿಲ್ಲದ, ಸಾಮಾನ್ಯರ ಬಳಕೆಗೆ ನಿಲುಕದ ಈ ಎರಡೂ ಸೌಲಭ್ಯಗಳು** ಹೇಗೆ ಮಲೆನಾಡಿನ ಗ್ರಾಮಾಂತರ ಜನತೆಗೆ ಉಪಯುಕ್ತವಾದಾವೋ ಹೇಳಲಾಗದು.

ನಿರ್ಣಯ ರೂಪದಲ್ಲಿ ಪಾಸಾಗದ, ಗುಡ್ಡದ ನೆತ್ತಿಯಲ್ಲಿ ಕಾಡು ಬೆಳೆಸುವುದೂ ಅಷ್ಟೆ. ಹೆಚ್ಚು ಜನ ಸಂಚಾರವಾಗಲೀ, ಜನ ಜಾನುವಾರುಗಳ ಕಾಟವಾಗಲೀ ಇಲ್ಲದ ಗುಡ್ಡದ ನೆತ್ತಿಯಲ್ಲಿ ಪ್ರಕೃತಿಯೇ ಕಾಡನ್ನು ಬೆಳೆಸಿಕೊಂಡಿಲ್ಲವೆಂದಮೇಲೆ; (ಗುಡ್ಡದ ನೆತ್ತಿ ಸಹಜವಾಗಿಯೇ ನುಣ್ಣಗಿರುತ್ತದೆ?) ಕೋಟ್ಯಾಂತರ ರೂಪಾಯಿ ಖರ್ಚುಮಾಡಿ, ನೀರು ನಿಲ್ಲದ, ಗಾಳಿಯ ರಭಸ ಹೆಚ್ಚಿರುವ ಗುಡ್ಡದ ನೆತ್ತಿಯಲ್ಲಿ ಕಾಡು ಬೆಳೆಸುವ ಪ್ರಯತ್ನ ಬೋಳು ನೆತ್ತಿಯವನಿಗೆ ಕೂದಲು ಬೆಳೆಸಲು ತೈಲ ಖರ್ಚುಮಾಡಿದಂತಾದೀತು

ಚರ್ಚೆಗೆ ಬಂದು ನಿರ್ಣಯವಾಗದೇ ಬಿಟ್ಟ ಇತರ ಅಂಶಗಳು ಯಾಕೆ ನಿರ್ಣಯವಾಗಲಿಲ್ಲವೆಂಬುದು ಕುತೂಹಲಕಾರಿಆಗಿದೆ.

(1)ಮಲೆನಾಡಿನ ಜಮೀನುಗಳ 'ಸಿ' ಮತ್ತು 'ಡಿ' ವರ್ಗೀಕರಣ ತಪ್ಪು ಮಾಹಿತಿಯಿಂದ ಮಾಡಲಾಗಿದ್ದು ಎಂಬುದು ಹೆಸರಾಂತ ಪರಿಸರಪ್ರೇಮಿಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಬರೆದ ಲೇಖನದಿಂದ ತಿಳಿದಿದೆ. 20 ರಿಂದ 40 ಅಂಗುಲ ಮಳೆ ಬೀಳುವ ಪ್ರದೇಶ ಮಲೆನಾಡಿನಲ್ಲಿಲ್ಲ ಎನ್ನುವ ವಾದ ಈ ವಿಚಾರಕ್ಕೆ ಆಧಾರವಾಗಿದೆ. ಅಂಥದೊಂದು ನಿರ್ಣಯ ಅಂಗೀಕೃತವಾಗಿದ್ದರೆ, ಸರ್ಕಾರದ ತಪ್ಪನ್ನು ತಿದ್ದಿಕೊಳ್ಳಲು ಅನುವಾಗಬಹುದಿತ್ತು.

(2) ಬೇಲಿ ಗೂಟಗಳ ಬದಲಿಗೆ ಕಲ್ಲು ಗೂಟಗಳಿಗೆ ಸಬ್ಸಿಡಿ—ಇದೂ ಸಹ ಸಮಂಜಸವಾಗಿತ್ತು. ಜಮೀನಿದ್ದವರೆಲ್ಲ ಬೇಲಿ ಗೂಟಗಳಿಗಾಗಿ ಪ್ರತೀವರ್ಷ ಎಳೆಯಸಸಿಗಳನ್ನು ಕಡಿಯುತ್ತಾರೆ. ಗೂಟಗಳು ಸದಾಕಾಲ ಮಣ್ಣು–ನೀರಿನ ಸಂಪರ್ಕದಲ್ಲಿರಬೇಕಾದುದರಿಂದ ಬಹಳ ಕಾಲ ಬಾಳಿಕೆ ಬರಬೇಕೆಂದು ಉತ್ತಮ ಜಾತಿಯ ಗೂಟಗಳನ್ನೇ ಕಡಿಯುತ್ತಾರೆ. ಹಾಗಿರುವಾಗ ಸಣ್ಣ ರೈತರಿಗಾದರೂ ಸಬ್ಸಿಡಿ ಕೊಡಮಾಡಿದ್ದರೆ ಒಮ್ಮೆ ಕಲ್ಲಿನ ಗೂಟ ತರಿಸಿ ಹುಗಿಸಿದರೆ ಅವು ಹತ್ತಾರು ವರ್ಷಗಳ ಕಾಲ ಬೇಲಿ ಗೂಟ ಕಡಿಸುವುದನ್ನು ತಪ್ಪಿಸುತ್ತಿದ್ದವು. ಶ್ರೀರಾಮಂತರೂ ಅಲ್ಲದ ತೀರಾ ಬಡವರೂ ಅಲ್ಲದ ಈ ಸಣ್ಣ ರೈತರು ಸಬ್ಸಿಡಿಯ ದುರುಪಯೋಗ ಮಾಡಿಕೊಳ್ಳುವ ಸಂಭವ ಕಡಿಮೆ

(ಮೂರನೇ ಪುಟಕ್ಕೆ)

ಓದುಗರ ಪತ್ರಗಳು

ಪ್ರತಿಧ್ವನಿಗೆ ಕೃತಜ್ಞತೆ

ಕೆಮ್ಮಣ್ಣು ಗುಂಡಿಯ ಕುರಿತು 'ತರಂಗ' ದಲ್ಲಿನ ಬರಹಕ್ಕೆ ನೀವು 16-6-85 ರ ನಿಮ್ಮ ಪತ್ರಿಕೆಯಲ್ಲಿ ಪ್ರತಿಧ್ವನಿ ಕೊಟ್ಟ ಬಗ್ಗೆ ಅನನ್ಯ ಕೃತಜ್ಞತೆಗಳು.

—ಸಂತೋಷಕುಮಾರ್ ಗುಲ್ವಾಡಿ,
ಸಂಪಾದಕರು, 'ತರಂಗ'
ವಾರಪತ್ರಿಕೆ

“ಶಿವಶಂಕರ್ ಬಸ್‌ಗೆ ಪರ್ಮಿಟ್ ಆಗಿಲ್ಲ”

ಮಾನ್ಯರೇ,

ತಮ್ಮ ವಾರಪತ್ರಿಕೆಯ ದಿನಾಂಕ 16.6.85 ರ ಸಂಚಿಕೆಯಲ್ಲಿ ಶೃಂಗೇರಿ-ಕೊಪ್ಪ ಮಾರ್ಗದಲ್ಲಿರುವ ಕಾವಡಿಯಿಂದ ಶಾನುವಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ನಮ್ಮ ಕಂಪನಿಗೆ ಬಸ್ ಓಡಿಸಲು ಪರ್ಮಿಟ್ ಆಗಿದ್ದರೂ ಬಸ್ ಓಡಿಸುತ್ತಿಲ್ಲವೆಂಬ ಗ್ರಾಮಸ್ಥರ ಹೇಳಿಕೆಯನ್ನು ನೋಡಿ ನಮಗೆ ಆಶ್ಚರ್ಯವಾಗಿದೆ. ಸದ್ರಿ ಮಾರ್ಗದಲ್ಲಿ ಬಸ್ ಓಡಿಸಲು ನಮಗೆ ಯಾವುದೇ ಪರ್ಮಿಟ್ ಸಿಕ್ಕಿಲ್ಲ ಮತ್ತು ನಾವು ಆ ಮಾರ್ಗದಲ್ಲಿ ಪರ್ಮಿಟ್‌ಗೆ ಅರ್ಜಿಯನ್ನೂ ಹಾಕಿಲ್ಲ ಎಂದು ಕಂಪನಿಯ ಪರವಾಗಿ ಸ್ಪಷ್ಟಪಡಿಸುತ್ತಿದ್ದೇನೆ.

—ಶಿವಶಂಕರ್ ಮೋಟಾರ್ ಸರ್ವಿಸ್,
ಶಿವಮೊಗ್ಗ.

'ವನಶ್ರೀ ಸಂಪದ'— ಪಾಲುದಾರಿಕೆ ಸಂಸ್ಥೆಯ ಖಾಸಗಿ ನೈಸರ್ಗಿಕ ಅರಣ್ಯ

ಮಾನ್ಯರೆ,

ಕಲ್ಕೆರೆ ಹಳ್ಳದ ಸೇತುವೆ, ನೀರು ಕಾಲುವೆ, ಹಳ್ಳದಕಟ್ಟು-ಇವುಗಳ ಬಗ್ಗೆ ತಮ್ಮ ಪತ್ರಿಕೆಯಲ್ಲಿ (9.6.85) ಪ್ರಕಟಿಸಿದ್ದಕ್ಕೆ ತುಂಬಾ ಧನ್ಯವಾದಗಳು. ಎರಡನೆಯದಾಗಿ ನಾನು ಮತ್ತು ಬೇರೆ 4 ಜನ ಸ್ನೇಹಿತರು ಸೇರಿ ನೈಸರ್ಗಿಕವಾದ ಅರಣ್ಯವನ್ನು ಬೆಳೆಸುವುದು ಹಾಗೂ ವಿವಿಧ ಜಾತಿಯ ಮರಗಳನ್ನು ಬೆಳೆಸಿ, ಅರಣ್ಯ ಉತ್ಪತ್ತಿಯನ್ನು ಪಡೆಯುವ ಉದ್ದಿಶ್ಯದಿಂದ ದಿನಾಂಕ 17.5.85 ರಂದು ವನಶ್ರೀಸಂಪದ ಎಂಬ ಒಂದು ಪಾಲುದಾರಿಕೆ ಸಂಸ್ಥೆಯನ್ನುಸ್ಥಾಪಿಸಿದ್ದೇವೆ. ಬಹುಶಃ ಚಿಕ್ಕಮಗಳೂರು ಜಿಲ್ಲೆಯಲ್ಲೇ ಈ ಉದ್ದಿಶ್ಯದಿಂದ ಸ್ಥಾಪನೆಯಾದ ಪ್ರಥಮ ಸಂಸ್ಥೆ ಇದಾಗಿರಬಹುದು. ನಾನು ಈ ವಿವರಗಳನ್ನು ತಾ-21.6 85 ರಂದು ಡಿ.ಎಫ್.ಒ. ರವರಿಗೆ ಒದಗಿಸಿ ವಿವಿಧ ಜಾತಿಯ ಸಸಿಗಳನ್ನು ಅಪೇಕ್ಷಿಸಿದ್ದಕ್ಕೆ ತಮ್ಮಲ್ಲಿರುವ ಸಸಿಗಳನ್ನು ಕೊಡಿಸುವುದಾಗಿ ಭರವಸೆ ಕೊಟ್ಟಿರುತ್ತಾರೆ. ಸುಮಾರು 17-18 ಎಕ್ರೆ ಪ್ರದೇಶವು ಈ ಸಂಸ್ಥೆಗೆ ಸೇರುತ್ತೆ. ಮುಂದೆ ಸರ್ಕಾರದಿಂದ, ಅರಣ್ಯ ಇಲಾಖೆಯಿಂದ ಹೆಚ್ಚು ಸಹಕಾರ ಸಹಾಯ ಪಡೆದು ಇದನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿರುತ್ತೇನೆ.

—ಟಿ.ವಿ.ಎಸ್. ಹೇರಳೆ,
ತುಳುವಿನಕೊಪ್ಪ.

ಕೊಪ್ಪ ಪುರಸಭೆಯ ದೃಢವಾದ ಕ್ರಮಕ್ಕೆ ನ್ಯಾಯನಿಷ್ಠರ 'ಶಹಭಾಸ್'

ಮಳಿಗೆಗಳ ಹರಾಜಿನ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯ

ಕೊಪ್ಪ ಬಸ್ ಸ್ಟ್ಯಾಂಡಿನಲ್ಲಿದ್ದ ಪುರಸಭೆಯ ಪ್ರಶಸ್ತವಾದ ಮಳಿಗೆಗಳಲ್ಲಿ 15-20 ವರ್ಷಗಳಿಂದಲೂ ವ್ಯಾಪಾರ-ವಹಿವಾಟು ಮಾಡಿಕೊಂಡಿದ್ದು, 1980 ರಲ್ಲಿ ಕರಾರು ಮುಗಿಯುವ ಸಮಯಕ್ಕೆ ಈ ಮಳಿಗೆಗಳಿಗೆ ಸಾರ್ವಜನಿಕ ಬೇಡಿಕೆ ತುಂಬಾ ಇದ್ದುದನ್ನನುಸರಿಸಿ ಬಾಡಿಗೆಯನ್ನು ಪುರಸಭೆ ಮಿತವಾಗಿಯೇ ಹೆಚ್ಚಿಸಿದಾಗ “ಒಂದು ಪೈಸೆ ಕೂಡಾ ಹೆಚ್ಚು ಕೊಡುವುದಿಲ್ಲ” ಎಂದು ಪುರಸಭೆಯ ವಿರುದ್ಧ ಕೋರ್ಟಿಗೆ ಹೋದುದಲ್ಲದೆ, ಅಲ್ಲಿ ಪದೇ ಪದೇ ಸೋಲಾದಾಗಲೂ ಅಲ್ಲಿನ ತೀರ್ಪುಗಳಿಗೆ ಬೆಲೆ ಕೊಡದೆ ನ್ಯಾಯ, ಕಾನೂನುಗಳ ನಡವಳಿಕೆಯನ್ನೆಲ್ಲ ಕಾಲ ಕಸ ಮಾಡಿ ವರ್ತಿಸಿದವರನ್ನು ಪುರಸಭೆ ಕಾನೂನಿನ ಚೌಕಟ್ಟಿನಲ್ಲೇ ದೃಢ ನಿಶ್ಚಯದಿಂದ ಯಶಸ್ವಿಯಾಗಿ ತೆರವು ಮಾಡಿಸಿದ ಬಗ್ಗೆ ಇಡೀ ಊರಿನ-ಸುತ್ತಮುತ್ತಲಿನ ಎಲ್ಲ ನ್ಯಾಯ ನಿಷ್ಠ ಜನರೂ ಮೆಚ್ಚಿ ಅಭಿನಂದಿಸಿದ್ದಾರೆ.

ಈ ಹಗರಣದಿಂದ ಒಂದೆರಡು ವ್ಯಾಪಾರಿಗಳಿಗೆ ತೀವ್ರ ತೊಂದರೆಯಾಯಿತೆಂಬುದು ನಿಜ. ಬೇರೆಯವರೆಲ್ಲ ಬಗೆ ಬಗೆಯಿಂದ—ಈ ಮಳಿಗೆಗಳನ್ನು ಬೇರೆಯವರಿಗೆ 200-250 ರೂ.ಗಳಿಗೆ ಬಾಡಿಗೆ ಕೊಡುವುದರಿಂದ ಸಹ—ಸಾಕು-ಬೇಕಷ್ಟು ದುಡ್ಡು, ಆಸ್ತಿ ಮಾಡಿಕೊಂಡರೂ ಈ ಒಂದೆರಡು ಜನ ಅಂಥ ಭಾರಿ ಉತ್ತಮ ಸ್ಥಿತಿಯಲ್ಲೇನೂ ಇರಲಿಲ್ಲ. ಅದಕ್ಕನುಗುಣವಾಗಿ ಅವರುಗಳು ಪುರಸಭೆಯ ನೀತಿಯನ್ನು ವಿರೋಧಿಸಿಯೂ ಇರಲಿಲ್ಲ. ಬೇರೆಯವರ ಒತ್ತಾಯದಿಂದ ಹಾಗೂ ಅನಿವಾರ್ಯವಾಗಿ ಅವರುಗಳೂ ಈ ಜಂಜಾಟದಲ್ಲಿ ಸಿಲುಕಿ ನಷ್ಟಕ್ಕೀಡಾಗಬೇಕಾಯಿತು.

ಈ ಹತ್ತೂ ಜನ ತಲಾ 14-15 ಸಾವಿರ ರೂ. ಬಾಡಿಗೆ ಬಾಕಿಯನ್ನು-ಒಟ್ಟು ಒಂದೂವರೆ ಲಕ್ಷ ರೂ.ಗಳನ್ನು-ಪುರಸಭೆಗೆ ಕಟ್ಟಬೇಕಾಗಿದೆ. ಇಡೀ ಊರಿನ ಅಭಿವೃದ್ಧಿಗೆ ಬಳಕೆಯಾಗಬೇಕಾದ ಈ ನ್ಯಾಯಬದ್ಧ ಹಣವನ್ನು ಯಾರೋ ಕೆಲವರು ನುಂಗಿ ಹಾಕುವುದಕ್ಕೆ ಪುರಸಭೆ ಮತ್ತು ನಾಗರಿಕರು ಬಿಡಬಾರದು. ಪುರಸಭೆಯಂತೂ ಇದರ ವಸೂಲಿಗಾಗಿ ಜಪ್ತಿ ಕ್ರಮ ಜರುಗಿಸಿಯೇ ಜರುಗಿಸುತ್ತದೆ.

ಈ ದಿಸೆಯಲ್ಲಿ ಸ್ಪಷ್ಟವಾದ ಕೋರ್ಟಿನ ತೀರ್ಪುಗಳೇ ಇರುವಾಗ ಅವರುಗಳು ಎಷ್ಟೇ ಲಾಗ ಹಾಕಿದರೂ ಈ ಹಣ ಕಟ್ಟುವುದನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ. ಹೆಚ್ಚೆಂದರೆ ಲಾಯರುಗಳಿಗೆ, ಕೋರ್ಟಿಗೆ ಇನ್ನೊಂದಷ್ಟು ಸಾವಿರಗಳನ್ನು ಸುರಿಯಬಹುದು, ಇನ್ನೊಂದೆರಡು ವರ್ಷ ಜಗ್ಗಾಡಬಹುದು, ಅಷ್ಟೆ.

ಆದ್ದರಿಂದ ಅವರುಗಳು ಜಪ್ತಿಗೆ ಅವಕಾಶ ಕೊಟ್ಟುಕೊಳ್ಳದೆ ನ್ಯಾಯವಾದ ಮಾರ್ಗದಲ್ಲಿ ಬಾಕಿ ಕಟ್ಟುವುದು ಅವರಿಗೆ ಸ್ವಲ್ಪ ಮರ್ಯಾದೆಯನ್ನೂ ತರಬಲ್ಲುದು; ಜೊತೆಗೆ ಈಗಾಗಲೇ ಊರಿನ ನಾಗರಿಕ ಸಮುದಾಯದ ಸಜ್ಜನಿಕೆಯ ಮೇಲೆ ಮಾಡಿದ ಈ ದಾಳಿಗೆ ಸ್ವಲ್ಪವಾದರೂ ತೀರುವೆ ಕೊಟ್ಟಂತಾಗಬಲ್ಲುದು.

(ನಾಲ್ಕನೇ ಪುಟಕ್ಕೆ)

....ನಿರ್ಣಯಗಳ ಸಮಂಜಸತೆಯ ಬಗ್ಗೆ

(ಎರಡನೆ ಪುಟದಿಂದ)

ಇತ್ತು. ತಂತಿಗಳಿಲ್ಲದಿದ್ದರೆ ದಬ್ಬೆಗಳ ಉಪಯೋಗ ಮಾಡಿಕೊಳ್ಳುತ್ತಿದ್ದರು. ಅಂದರೆ ಈ ಸೌಲಭ್ಯ ಕಾಫಿ ಎಸ್ಟೇಟುಗಳಿಗೆ, ದೊಡ್ಡ ರೈತರಿಗೆ ಸಿಕ್ಕುವುದನ್ನು ತಪ್ಪಿಸುವಂತೆ ನಿರ್ಣಯವಾಗಬಹುದಿತ್ತು (ಇದನ್ನು ಮುಂಗಂಡು ನಿರ್ಣಯ ಬಿದ್ದುಹೋಯಿತೆ?)

(3) ಕಾಡಿನಲ್ಲಿನ ಬಿದ್ದ ಮರಗಳದ್ದೂ ಅಷ್ಟೆ. ಒಂದೇ ನಿಟ್ಟಿನಲ್ಲಿ ಲಾರಿಗಟ್ಟಲೇ ಸಿಗದಿದ್ದರೂ ಸಮೀಪದ ರೈತರ ವಾರ್ಷಿಕ ಬೇಡಿಕೆಗಳಿಗೆ, ಕೊಟ್ಟಿಗೆ, ಮನೆ ರಿಪೇರಿಗಳಿಗೆ ಅವರು ಕದ್ದು ಮುಚ್ಚಿ ಬೇರೆ ಮರಗಳನ್ನು ಕಡಿಯುವುದನ್ನು ತಪ್ಪಿಸಬಹುದಿತ್ತು. ನಿರ್ದಿಷ್ಟವಾದ ದಿನ ನಿರ್ದಿಷ್ಟವಾದ ಜಾಗದಲ್ಲಿ ಹರಾಜಿನ ಮೂಲಕ ವಿಲೇವಾರಿ ಮಾಡಿದ್ದರೆ ಲೋಡುಗಳಿಲ್ಲದ ಕಾರಣ ಹೊರಗಿನವರು ಹೆಚ್ಚಾಗಿ ಬಾರದೆ ಸ್ಥಳೀಯರೇ ಬಿಡ್ ಮಾಡುತ್ತಿದ್ದರಲ್ಲವೆ? ಆದರೆ ಲೋಡ್‌ಗಟ್ಟಲೇ ಇರುವುದಿಲ್ಲ, ಅರಣ್ಯಾಧಿಕಾರಿಗಳಿಗೆ ಕಾಡೊಳಗೆ ಪದೇ ಪದೇ ನುಗ್ಗಬೇಕಾಗುತ್ತದೆ, ಪೆಟ್ರೋಲ್ ಖರ್ಚು, ಕಾರ್ಯ ಹಾನಿ ಇತ್ಯಾದಿ ಸಬೂಬುಗಳಿಂದ ಈ ನಿರ್ಣಯ ಬಿದ್ದು ಹೋಗಿರಬಹುದೆ? ಆದರೆ ಈಗಲೇ ಇಂತಹ ಒಂದು ನಿಯಮ ಅರಣ್ಯ ಇಲಾಖೆಯ ಕೋಡ್ ಪುಸ್ತಕದಲ್ಲಿದೆಯಂತೆ?

ಒಟ್ಟಿನಲ್ಲಿ ನಿರ್ಣಯ ನಂಬ್ರ 3, 8, 12 (ಪರಿಸರ ಅಸಮತೋಲನಕ್ಕೆ ಕಾರಣವಾಗುವ ಭಾರಿ ನೀರಾವರಿಯೋಜನೆಗಳನ್ನು ಅನುಷ್ಠಾನಗೊಳಿಸಬಾರದು ಮತ್ತು ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗುವ ಪ್ಲಾಂಟೇಶನ್‌ಗಳಿಗೆ ಅವಕಾಶ ಸಲ್ಲದು; ತೆಂಗು-ಅಡಿಕೆ ಇತ್ಯಾದಿಗಳ ಕಸಕಡ್ಡಿಯನ್ನು ಸೌದೆಯ ಬದಲು ಉಪಯೋಗಿಸಬಲ್ಲ ಒಲೆಯ ಅಭಿವೃದ್ಧಿ. 'ಕುಮ್ಕಿ' ಹಕ್ಕು ನೀಡುವಿಕೆ.)— ಇವುಗಳ ಹೊರತಾಗಿ (2-6-85ರ 'ಮುಂಜಾವು'ನಲ್ಲಿ ಪ್ರಕಟವಾದಂತೆ) ಉಳಿದವುಗಳು ಯಾವುದೇ ಗಮನಾರ್ಹವಾಗಿ ಉಪಯುಕ್ತವಾದವುಗಳಲ್ಲ.

ನಿಮ್ಮ ಸಲಹೆಗಳನ್ನು ಚರ್ಚಿಸಲು ತಿರಸ್ಕರಿಸಿದ್ದುದನ್ನೂ ಪರಿಗಣನೆಗೆ ತೆಗೆದುಕೊಂಡರೆ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದವರಲ್ಲಿ ಬಹಳ ಜನ ಶ್ರೀ ಟಿ.ಪಿ.ಶ್ರೀನಾಥ್, ಹೆಗ್ಗಾರು ಇವರು ತಿಳಿಸಿದಂತೆ ('ಮುಂಜಾವು' 16-6-85) ಅರಣ್ಯ ಸಂರಕ್ಷಣಾ 'ಧಾರ್ಮಿಕರು', ಕೆಲವರು ಸೊಲ್ಲೆತ್ತಲಾರದವರು ಮತ್ತೆ ಕೆಲವರು ನಾಜೂಕಿನವರು (ಲಕ್ಷಣವಾಗಿ ಕೂರುವವರು!) ಇಂತ ಅನ್ನಿಸುತ್ತದೆಯೆ?

[ವಿ.ಸೂ: ಈ ಬರಹ ಬರೆದವನು ಬೃಹಸ್ಪತಿಯಲ್ಲದಿರಬಹುದು. ಬರಹ ಮೌಲಿಕವಲ್ಲದ್ದಿರಬಹುದು ಆದರೆ ತೆಗೆದುಕೊಂಡ ನಿರ್ಣಯಗಳು ನೆಲಕ್ಕೆ ಸೋಕದ ತ್ರಿಶಂಕುಗಳಾದ್ದರಿಂದ ಬರೆಯಬೇಕಾಯಿತು.]

—ಗುಂಡಪ್ಪ, ಮೈಸೂರು.

(... ಪುಟದಿಂದ)

ಈ ವಿಷಯದಲ್ಲಿ ಪುರಸಭಾಧ್ಯಕ್ಷ ಮತ್ತು ಕೌನ್ಸಿಲ್ಲನ್ನೂ, ಮುಖ್ಯಾಧಿಕಾರಿಗಳನ್ನೂ ಕ್ಷುಲ್ಲಕವಾಗಿ ಟೀಕಿಸುವ ಹರಕು ಬಾಯಿಗಳು ಇದ್ದೇ ಇರುತ್ತವೆ. ಇವು ಎಷ್ಟೆಂದರೂ ಸ್ವತಃ ಅಂಥ ನಡತೆಯವೇ ಆಗಿದ್ದು, ಅದನ್ನೇ ಬೇರೆಯವರಲ್ಲೂ ಪ್ರೋತ್ಸಾಹಿಸುತ್ತವೆ. ಕ್ಷುದ್ರ ನಾಲಿಗೆಗೆ ಶಬ್ದ ಜಾಸ್ತಿ ಎಂಬಂತೆ ಇವು ಜೋರಾದ ಗುಲ್ಲೆಬ್ಬಿಸಿ ಪುರಸಭೆಯವರ ಮೇಲೆ ಒಂದು ರೀತಿಯ, ಸಾರ್ವಜನಿಕ ಅಭಿಪ್ರಾಯವೇನೋ ಎಂದು ಕಾಣುವಂತಹ ಒತ್ತಡ ತರಲೂಬಹುದು. ಆದರೆ ಪುರಸಭೆ ಇದಕ್ಕೆ ಜಗ್ಗಬಾರದು. ಅಧ್ಯಕ್ಷ ಮಂಜುನಾಥಶೆಟ್ಟಿ ಮತ್ತು ಮುಖ್ಯಾಧಿಕಾರಿ ಗುಂಡೂರಾವ್ ಇವರುಗಳು ಸಾರ್ವಜನಿಕರಬಗ್ಗೆ ಬಹಳಮೃದು ಸ್ವಭಾವದವರಾದರೂ ಕಳೆದ ವರ್ಷದ ಬಸ್ ಸ್ಟ್ಯಾಂಡ್ ಹೋಟೆಲ್ ಹಗರಣದಲ್ಲಾಗಲೀ, ಈಗಿನ ಪ್ರಕರಣದಲ್ಲಾಗಲಿ, ಎಲ್ಲಾ ಟೀಕೆ–ಅವಹೇಳನಗಳನ್ನೂ ನುಂಗಿಕೊಂಡು ದೃಢ ನಿಶ್ಚಯದಿಂದ, ಕಾನೂನಿನ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವ 'ಜಾಣ'ರ ಧೂರ್ತತನವನ್ನು ಮೆಟ್ಟಿದ್ದಾರೆ. ಬಹುಶಃ ಇಡೀ ಕೌನ್ಸಿಲ್ ಇದಕ್ಕೆ ಬೆಂಬಲವಾಗಿ ನಿಂತು ಊರಿನ ಹಿತ ಕಾಯುವಲ್ಲಿ ಸೈ ಎನ್ನಿಸಿಕೊಂಡಿದೆ. ('ಆಚೆಗೂ ಸರಿ-ಈಚೆಗೂ ಸರಿ' ಎಂಬಂಥ ಒಬ್ಬಿಬ್ಬರು ಇರಲೂಬಹುದು. ಒಟ್ಟನಲ್ಲಿ ಕೌನ್ಸಿಲ್ ತನ್ನ ಕರ್ತವ್ಯ ಚೆನ್ನಾಗಿ ಮಾಡಿದೆ.) ಇವರುಗಳು ಇನ್ನು ಮುಂದೆ

ಕೊಪ್ಪ ಪುರಸಭೆಯ ಮಳಿಗೆಗಳ ಹರಾಜು ಕುರಿತು....

ಯೂ ಸಹ ಕ್ಷುಲ್ಲಕ ಟೀಕೆಗಳಿಗೆ ಅಳುಕದೆ ದೃಢತೆಯನ್ನು ಉಳಿಸಿಕೊಂಡು ಸಾರ್ವಜನಿಕರ ಸ್ವತ್ತನ್ನು ಲೂಟಿ ಮಾಡುವ ಎಲ್ಲರ ವಿರುದ್ಧವೂ ಬಿಗಿಯಾಗಿ ವರ್ತಿಸಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿ ಇಲ್ಲಿ ಉಲ್ಲೇಖಿಸುವುದು ಸೂಕ್ತ. ಇನ್ನೂ ಒಂದೆರಡು ಪಾರ್ಟಿಗಳು ತಮ್ಮ ಸ್ವತ್ತುಗಳ ಸಂಬಂಧದಲ್ಲಿ ಪುರಸಭೆಯ ವಿರುದ್ಧ ಕೋರ್ಟಿಗೆ ಹೋಗುವ ದಾರಿಯಲ್ಲಿರುವಂತೆ ಕಾಣುತ್ತದೆ. ಅವರುಗಳು ಹಿಂದೆ ಪುರಸಭೆಯಲ್ಲಿ ಅಧಿಕಾರ ನಡೆಸಿದವರೇ. ತಮ್ಮ ಈ ಸ್ವತ್ತುಗಳನ್ನು ಅವರು ಯಾವ 'ಬಲ'ದಿಂದ ಗಳಿಸಿಕೊಂಡರು ಎಂಬುದು ಇಲ್ಲಿ ಅಪ್ರಸ್ತುತ. ಆದರೆ ಅವರುಗಳು ಪುರಸಭೆಯ ಹಳೆಯ ನಿರ್ಣಯಗಳು, ಮೂಲ ದಾಖಲಾತಿಗಳು ಮುಂತಾದುವನ್ನು ಪರಿಶೀಲಿಸಿಕೊಂಡು ಹಾಗೂ ತಮ್ಮ ಮನಸ್ಸಾಕ್ಷಿಗೆ ಖಂಡಿತವಾಗಿಯೂ ಗೊತ್ತಿರುವಂತೆ ನ್ಯಾಯವಾಗಿಯೂ ತಮಗೆ ಸಲ್ಲಬೇಕಾದ್ದಕ್ಕೆ ಮಾತ್ರ ತಗಾದೆ ಮಾಡುವುದು ಒಳ್ಳೆಯದು.

§ § §

ಇನ್ನೊಂದು ವಿಚಾರವನ್ನು ಪುರಸಭೆ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳು ತುರ್ತಾಗಿ ಗಮನಿಸಬೇಕಾಗಿದೆ. ಅದೇನೆಂದರೆ, ಪುರಸಭೆಯ ಮಳಿಗೆಗಳಲ್ಲಿ ಕೆಲವನ್ನು ವರ್ಷಕ್ಕೊಮ್ಮೆಯೂ ಕೆಲವನ್ನು

ಸುಳ್ಳು ಅಂಕಿ-ಅಂಶ, ವರದಿಗಳನ್ನು ಕೊಡುವುದು ಸುಲಭವಲ್ಲ.

ಕೆಲಸದ ಲೋಪದೋಷಗಳು ಕಂಡುಬಂದಾಗ ಕೆಲವರಿಗೆ ಬುದ್ಧಿವಾದ ಹೇಳುತ್ತಾರೆ. ಕೆಲವರಿಗೆ ಎಚ್ಚರಿಕೆ ನೀಡುತ್ತಾರೆ. ಮತ್ತೆ ಕೆಲವರಿಗೆ (ಸಸ್ಪೆಂಡ್ ಮಾಡುತ್ತೇನೆ ಮುಂತಾಗಿ) ಛೀಮಾರಿ ಹಾಕುತ್ತಾರೆ. ಒಟ್ಟನಲ್ಲಿ, ಪರಿಸ್ಥಿತಿಯ ಮಿತಿಯಲ್ಲಿ, ಈಗಿನ ಸಮಿತಿಗಳು ಬಹಳ ಚೆನ್ನಾಗಿಯೇ ಕೆಲಸ ಮಾಡುತ್ತಿವೆಯೆಂಬುದನ್ನು ಒಪ್ಪಲೇಬೇಕು" ಎಂದು ಈ ಹಳೇ ಕಾಂಗ್ರೆಸಿಗ ಅಭಿಮಾನಪಡುತ್ತಾರೆ.

"ನಮ್ಮ ಕಾಲದಲ್ಲಿ ಈ ಸಭೆಯೊಂದು ಕಾಟಾಚಾರದ ಸಭೆಯಾಗಿರುತ್ತಿತ್ತು. ಎಷ್ಟೋ ಅಧಿಕಾರಿಗಳು ಹಾಜರಾಗುತ್ತಲೇ ಇರಲಿಲ್ಲ. ಹಿಂದಿನ ಸಭೆಯ ವರದಿಗಳನ್ನೇ ಮತ್ತೆ ಮತ್ತೆ ಚರ್ಚಿಸಲಾಗುತ್ತಿತ್ತು. ನಾವು ತರುವ ಸಮಸ್ಯೆಗಳಿಗೆ ಸಮಂಜಸವಾದ ಯಾವ ಪರಿಹಾರವೂ ದೊರೆಯುತ್ತಿರಲಿಲ್ಲ. ಮಂತ್ರಿಗಳಂತೂ ಹೇಗೂ ಹಾಜರಿರುತ್ತಿರಲಿಲ್ಲ. ಒಟ್ಟನಲ್ಲಿ ಈ ಕಾರ್ಯಕ್ರಮವೇ ಒಂದು ಶುದ್ಧ ವೈಫಲ್ಯವಾಗಿತ್ತೆನ್ನಬೇಕು" ಎಂದು ಅವರು ವಿಷಾದದಿಂದ ನೆನೆಯುತ್ತಾರೆ.

"ಅಂದರೆ, ನನಗೆ ಗೋವಿಂದಗೌಡರ ಕಾರ್ಯತತ್ಪರತೆಯ ಬಗ್ಗೆ ಮೆಚ್ಚುಗೆ, ಅವರ ಪ್ರಾಮಾಣಿಕ ಪ್ರಯತ್ನದ ಬಗ್ಗೆ ಗೌರವ

ಇವೆಯೇ ಹೊರತು ಅವರ ಪಕ್ಷದ ಬಗ್ಗೆ ಖಂಡಿತ ಗೌರವವಿಲ್ಲ" ಎಂದು ಸೇರಿಸಲು ಮಾತ್ರ ಈ ಕಾಂಗ್ರೆಸಿಗ ಮರೆಯುವುದಿಲ್ಲ!

ಆದ್ದರಿಂದ ಈ ಪರಿಸ್ಥಿತಿಯನ್ನು ತಪ್ಪಿಸಿ, ವ್ಯಾಪಾರೋದ್ಯಮಿಗಳಿಗೆ ಉತ್ತೇಜನ ದೊರಕಿಸುವುದರ ಜೊತೆಗೆ ಊರಿನ ಬೆಳವಣಿಗೆಗೂ ದಾರಿ ಮಾಡಲು ಈ ಹರಾಜಿನ ಅವಧಿಯನ್ನು ಗಣನೀಯವಾಗಿ ಏರಿಸಬೇಕೆಂದು ಸಾರ್ವಜನಿಕರ ಒಕ್ಕೊರಲಿನ ಅಭಿಪ್ರಾಯವಾಗಿದೆ. ತಾತ್ಕಾಲಿಕ ಮಳಿಗೆಗಳನ್ನು (ಈಗ ಒಂದು ವರ್ಷಕ್ಕೆ ಹರಾಜಾಗುವಂಥವು) ಕನಿಷ್ಠ 5 ವರ್ಷಗಳಿಗೂ, ಖಾಯಂ ಮಳಿಗೆಗಳನ್ನು ಕನಿಷ್ಠ 10 ವರ್ಷಗಳಿಗೂ ಬಾಡಿಗೆಗೆ ಕೊಡಬೇಕೆಂಬುದು ಅವರ ಅಪೇಕ್ಷೆ.

ಹಾಗೆಂದು ಈ ಮಳಿಗೆಗಳಿಗೆ ಕಾಲಕಾಲಕ್ಕೆ ಬಾಡಿಗೆ ಏರಿಸಬಾರದೆಂದು ಅರ್ಥವಲ್ಲ. ಯಾವುದಾದರೊಂದು ನಿರ್ದಿಷ್ಟ ಸೂತ್ರದಂತೆ ಬಾಡಿಗೆ ಹೆಚ್ಚುವರಿಯಾಗುವಂತೆ ಮಾಡಬಹುದು ಮತ್ತು ಇದು ಆಯಾ ಸಮಯದಲ್ಲಿ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿರುವ ಮಟ್ಟದಲ್ಲಿರಬಹುದು.

ಇದು ರಾಜ್ಯಮಟ್ಟದಲ್ಲೇ ಬಗೆಹರಿಯಬೇಕಾದ ಸಮಸ್ಯೆ. ಪುರಸಭೆಗಳ ಆಡಳಿತ ಸುಧಾರಣೆ ಬಗ್ಗೆ ಕಳೆದ ವರ್ಷ ಸರ್ಕಾರ ನೇಮಿಸಿದ್ದ ಸಮಿತಿಯ ಮುಂದೆ ಬಂದಿದ್ದ ಶಿಫಾರ್ಸುಗಳನ್ನೆಲ್ಲ ಸಮಿತಿ ಈಗ ಪರಿಶೀಲಿಸುತ್ತಿದ್ದು, ಸುಮಾರು 30–40 ನಿಯಮಗಳು ಬದಲಾಗುವ ನಿರೀಕ್ಷೆಯಿದೆಯಂತೆ. ಅದರಲ್ಲಿ ಈ ಸಂಬಂಧದ ನಿಯಮಾವಳಿಯೂ ಸೇರಿದೆಯೋ ಎಂಬುದು ಗೊತ್ತಾಗಿಲ್ಲ. ಸೇರಿಲ್ಲವಾದರೆ ಇದನ್ನೂ ಸೇರಿಸಿ ಮಾರ್ಪಾಡು ಮಾಡುವುದಕ್ಕೆ ಸಂಬಂಧಪಟ್ಟ ಯಾರಾದರೂ ಆಸಕ್ತಿ ವಹಿಸಬೇಕು.

ಇಲ್ಲವಾದರೆ ಪುರಸಭೆಗಳಿಗೆ ಇಂಥ ಹಗರಣಗಳು ಪದೇ ಪದೇ ಎದುರಾಗುತ್ತಲೇ ಇರುತ್ತವೆ. ಕೊಪ್ಪದಂಥ ದೃಢನಿರ್ಧಾರದ ಕೌನ್ಸಿಲ್ ಇಲ್ಲದ ಕಡೆ ಸಾರ್ವಜನಿಕ ಸೌಲತ್ತನ್ನೂ ಹಣವನ್ನೂ ಅನ್ಯಾಯಿಗಳು ಮುಕ್ಕುತ್ತಲೇ ಹೋಗುತ್ತಾರೆ. ಇನ್ನೊಂದೆಡೆಯಿಂದ ಅದರಲ್ಲೊಂದು ಪಾಲು ಭ್ರಷ್ಟಾಚಾರಕ್ಕೂ ಸಲ್ಲುತ್ತಿರುತ್ತದೆ. ●

ಕ್ಷೇತ್ರದ 20 ಅಂಶ ಕಾರ್ಯಕ್ರಮದ ಸಭೆಗಳ ಬಗ್ಗೆ
ಹಿರಿಯ ಕಾಂಗ್ರೆ ಸದಸ್ಯರೊಬ್ಬರ ಮೆಚ್ಚುಗೆ

ಕೊಪ್ಪ: ಕ್ಷೇತ್ರದ ಶಾಸಕ ಹಾಗೂ ಮಂತ್ರಿ ಗೋವಿಂದಗೌಡರ ನೇತೃತ್ವದಲ್ಲಿ ನಡೆಯುತ್ತಿರುವ ಕ್ಷೇತ್ರದ 20 ಅಂಶ ಕಾರ್ಯಕ್ರಮದ ಸಭೆಗಳ ಬಗ್ಗೆ ಹಿರಿಯ ಕಾಂಗ್ರೆ ಸದಸ್ಯರೊಬ್ಬರು ತುಂಬು ಹೃದಯದ ಮೆಚ್ಚುಗೆ ಸೂಚಿಸಿದ್ದಾರೆ.

ಕಾಂಗ್ರೆ ಸರ್ಕಾರದಲ್ಲಿ ಈ ತಾಲ್ಲೂಕಿನ 20 ಅಂಶ ಕಾರ್ಯಕ್ರಮ ಸಮಿತಿಯ ಪ್ರಮುಖ ಸದಸ್ಯರೂ ಆಗಿದ್ದ ಅವರು ಈಚೆಗೆ ತಮ್ಮೂರಿನ ಸಮಸ್ಯೆಯೊಂದರ ಬಗ್ಗೆ ಮಂತ್ರಿಗಳು ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಮನವಿ ಸಲ್ಲಿಸಲು 20–ಅಂಶ ಕಾರ್ಯಕ್ರಮ ಸಮಿತಿಯ ಸಭೆ ನಡೆಯುತ್ತಿದ್ದಲ್ಲಿಗೇ ಹೋಗಬೇಕಾಗಿ ಬಂತು. ಅವರ ಮನವಿ ಸ್ವೀಕರಿಸಿದ ಮಂತ್ರಿಗಳು, ಸ್ವಾತಂತ್ರ್ಯ ಚಳುವಳಿಯ ದಿನಗಳಿಂದಲೂ ಕಾಂಗ್ರೆಸ್‌ನಲ್ಲಿ ಒಟ್ಟಿಗೆ ಕೆಲಸ ಮಾಡಿದ ಗೆಳೆತನದಿಂದಾಗಿ ಸದರಿ ಸಭೆಯಲ್ಲಿ ಕೂರಿಸಿಕೊಂಡರು. ಆಗ ಈ ಹಿರಿಯರಿಗೆ ತಮ್ಮ ಪಕ್ಷದ ಆಡಳಿತ ಕಾಲದ ಈ ಸಭೆಗೂ ಈಗಿನದಕ್ಕೂ ತುಲನೆ ಮಾಡುವ ಅವಕಾಶ ದೊರಕಿತು.

"ಈಗಿನ ಸಭೆಗಳು ಬಹಳ ವಸ್ತುನಿಷ್ಠವಾಗಿ, ಉದ್ದೇಶ ನಿಷ್ಠವಾಗಿ ನಡೆಯುತ್ತವೆ. ತಾಲ್ಲೂಕಿನ ಎಲ್ಲ ಅಧಿಕಾರಿಗಳೂ ಹಾಜರಾಗುತ್ತಾರೆ. ಎಲ್ಲರೂ ಕರಾರುವಾಕ್ಕಾದ ವರದಿ ಮಂಡಿಸಬೇಕಾಗುತ್ತದೆ. ಏಕೆಂದರೆ ವರದಿಯನ್ನು 'ಚೆಕ್' ಮಾಡುತ್ತಾರೆ. ಇಂಥ ವಿಮರ್ಶಾತ್ಮಕ ದೃಷ್ಟಿಯೆದುರು ಸುಳ್ಳು

ಮೂರು ವರ್ಷಕ್ಕೊಮ್ಮೆಯೂ ಹರಾಜು ಹಾಕುವ ವಿಚಾರ.

ಹೀಗೆ ಮಾಡುವುದು ಬಹಳ ಅನ್ಯಾಯವೆಂದು ಮೇಲು ನೋಟಕ್ಕೇ ಅನ್ನಿಸುತ್ತದೆ. ಯಾವುದೇ ವ್ಯಾಪಾರ ಅಥವಾ ಉದ್ಯಮ ಗಟ್ಟಿಯಾಗಿ ನೆಲೆಯೂರಿ, ಲಾಭದಾಯಕವಾಗಬೇಕಾದರೆ ಕನಿಷ್ಠ 2ರಿಂದ 3 ವರ್ಷ ಬೇಕಾಗುತ್ತದೆ. ಒಂದು ವರ್ಷದಲ್ಲಂತೂ ಯಾವುದೇ ವ್ಯಾಪಾರೋದ್ಯಮ ಏಳಿಗೆಯ ದಾರಿ ಹತ್ತಲಾರದು.

ಅಷ್ಟರೊಳಗೆ ಅದನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕಾದ ಪರಿಸ್ಥಿತಿ ಆ ಉದ್ಯಮಿಗೆ ಈಗಿನ ನೀತಿಯಿಂದ ಉಂಟಾಗುತ್ತಿದೆ. ಪ್ರತಿಸಲವೂ ಆತ ಅಲ್ಲಿಯೇ ಉಳಿಯಬೇಕಾದರೆ ಪ್ರತಿಸಲವೂ ಹರಾಜಿನಲ್ಲಿ ವಿಪರೀತವಾಗಿ ಬಾಡಿಗೆ ಹೆಚ್ಚಳವನ್ನು ಎದುರಿಸಬೇಕು. ಯಾರಾದರೂ ಆತನಿಗೆ ಆಗದವರು ಬೇಕೆಂದೇ ಯದ್ವಾ ತದ್ವಾ ಏರಿಸಲೂಬಹುದು. ಏರಿಸಲೂಬಹುದು. ಇದೆಲ್ಲ ಇಲ್ಲವೆಂದರೆ, ಆ ಮಳಿಗೆಗಳಲ್ಲಿರುವವರಿಗೇ ಮತ್ತೆ ಮತ್ತೆ ಅವು ಸಿಗುವಂತೆ ಮಾಡಲು—ಲಂಚ ನಡೆಯುವ ಕಡೆಗಳಲ್ಲಿ—ಕೌನ್ಸಿಲರ್‌ಗಳಿಗೂ ಅಧಿಕಾರಿಗಳಿಗೂ ದುಡ್ಡು ತಿನ್ನಲು ಒಂದು ಒಳ್ಳೆಯ ಸಾಧನವಾಗಿರುತ್ತದೆ ಈ ನೀತಿ.

ಹೀಗೆ ಪದೇ ಪದೇ ಮಳಿಗೆಗಳನ್ನು ಖಾಲಿ ಮಾಡಿಸುವುದರಿಂದಾಗಿ ಊರಿನ ಆ ಒಂದು ಭಾಗವೇ ಅಭಿವೃದ್ಧಿಗೊಳ್ಳದೆ ಹಾಳು ಸುರಿಯುತ್ತದೆ.

ನ. ರಾ. ಪುರ ವಾಣಿಜ್ಯ ಶಾಲೆಗೆ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶ

ನರಸಿಂಹರಾಜಪುರ: ಕಳೆದ ಮೇ ತಿಂಗಳಿನಲ್ಲಿ ನಡೆದ ವಾಣಿಜ್ಯ ಪರೀಕ್ಷೆಗಳಲ್ಲಿ ಇಲ್ಲಿನ ಜ್ಯೋತಿ ವಾಣಿಜ್ಯ ವಿದ್ಯಾ ಶಾಲೆಯಿಂದ ಒಟ್ಟು 53 ವಿದ್ಯಾರ್ಥಿಗಳು ವಿವಿಧ ವಾಣಿಜ್ಯ ಪರೀಕ್ಷೆಗಳಿಗೆ ಕುಳಿತಿದ್ದು, ಇವರಲ್ಲಿ ಪ್ರಥಮ ಶ್ರೇಣಿಯ 9 ಜನ ಸೇರಿದಂತೆ ಒಟ್ಟು 35 ಜನ ಪಾಸಾಗಿದ್ದು, ಕನ್ನಡ ಬೆರಳಚ್ಚು ಸೀನಿಯರ್ ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶ ಬಂದಿರುವುದಾಗಿ ಪ್ರಿನ್ಸಿಪಾಲ್ ತಿಳಿಸಿದ್ದಾರೆ.

ಜನಾಭಿಪ್ರಾಯ ಮುಖಂಡರ ತರಬೇತಿ ಶಿಬಿರ

ಚಿಲಗದ್ದೆ: ಆರೋಗ್ಯ ಇಲಾಖೆಯ ವತಿಯಿಂದ ಇಲ್ಲಿ ಜೂನ್ 14 ರಂದು ಜನಾಭಿಪ್ರಾಯ ಮುಖಂಡರ ತರಬೇತಿ ಶಿಬಿರ ನಡೆಯಿತು. ಕೆ. ಎನ್. ಗೋವಿಂದರಾವ್ ಅಧ್ಯಕ್ಷತೆ ವಹಿಸಿದ್ದು, ಕೊಪ್ಪ ಮತ್ತು ಹರಿಹರಪುರ ವೈದ್ಯಾಧಿಕಾರಿಗಳಾದ ಡಾ|| ಜಗದೀಶ್ ಮತ್ತು ಡಾ|| ತಿಮ್ಮಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಬಗ್ಗೆ ವಿವರವಾಗಿ ತಿಳಿಸಿದರು. ಇಲ್ಲಿಗೆ ಮೊದಲ ಬಾರಿಗೆ ಭೇಟಿ ಕೊಡುತ್ತಿರುವ ಡಾ|| ಜಗದೀಶ್, ಆರೋಗ್ಯದ ಬಗ್ಗೆ ತಮಗೆ ಇಷ್ಟೊಂದು ಮಾಹಿತಿ ನೀಡಿದ ತಾಲ್ಲೂಕು ಡಾಕ್ಟರರಲ್ಲಿಯೆ ಮೊದಲಿಗರೆಂದು ಜನರಿಂದ ಅಪಾರ ಮೆಚ್ಚುಗೆ ಗಳಿಸಿದರು.

ವಯಸ್ಕರ ಶಿಕ್ಷಣ ಸಲಹಾ ಸಮಿತಿ

ಜೂನ್ 24 ರಂದು ಕೆ.ಎನ್. ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಲ್ಲಿನ ವಯಸ್ಕರ ಶಿಕ್ಷಣ ಶಾಲೆಯ ಸಲಹಾ ಸಮಿತಿಯನ್ನು ರಚಿಸಲಾಯಿತು. ಇದಕ್ಕೆ ಕೆ.ಎಸ್. ರವಿಚಂದ್ರ ಅಧ್ಯಕ್ಷರಾಗಿದ್ದು, ಮಹಿಳಾ ಸದಸ್ಯರೂ ಸೇರಿ 8 ಜನ ಸದಸ್ಯರಿದ್ದಾರೆ. ವಯಸ್ಕರ ಶಿಕ್ಷಣದ ಶಿಕ್ಷಕ-ಶಿಕ್ಷಕಿಯರಾದ ಬಿ.ಎಸ್. ಕೃಷ್ಣಮೂರ್ತಿ ಮತ್ತು ಜಿ.ಎಮ್. ನಾಗರತ್ನ ಕಾರ್ಯದರ್ಶಿಗಳಾಗಿದ್ದಾರೆ. ಈ ಸಭೆಯಲ್ಲಿ ಕಳೆದೆರಡು ವರ್ಷಗಳಿಂದ ಶಿಕ್ಷಣ ಪಡೆಯುತ್ತಿರುವವರನ್ನು ಪರೀಕ್ಷಿಸಿ, ಅವರ ಉತ್ತಮ ಪ್ರಗತಿಯ ಬಗ್ಗೆ ಸಂತೋಷ ವ್ಯಕ್ತಪಡಿಸಲಾಯಿತು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾ... ಪೇಟೆ ... ಕೊಪ್ಪ.